ಶ್ರೀ ಹೆಚ್. ಡಿ. ದೇವೇಗೌಡ.— ನಾನು ಪ್ರಧಾನ ಮಂತ್ರಿಗಳ ಬಗ್ಗೆ ಅಗೌರವಾಗಿ ಮಾತನಾಡಿದ್ದೇನೆಯೇ ?

ಶ್ರೀ ಎಂ. ವೀರಪ್ಪ ಮೊಯಿಲಿ.—ಪ್ರಧಾನ ಮಂತ್ರಿಗಳ ವಿಚಾರ ಇಲ್ಲಿ ಏತಕ್ಕೆ ಬೇಕು ?

ಶ್ರೀ ಹೆಚ್. ಡಿ. ದೇವೇಗೌಡ.—ನಾನೇನು ಮಾತನಾಡಿದೆ ? ಕಾಂಗ್ರೇಸ್ಸಿ ಪಕ್ಷದಿಂದ ೪–೫ ಜನ ಸದಸ್ಯರು ಹೊರಗಡೆ ಬಂದಾಗ ಅವರನ್ನೇತಕ್ಕೆ ಡಿಸ್ ಕ್ವಾಲಿಫೈಡ್ ಮಾಡಲಿಲ್ಲವೆಂದೆ ? ಅವರು ನಮಗಿಂತ ಹೆಚ್ಚು ಕಾನೂನು ಪಂಡಿತರು. ನಮಗಿಂತ ಹೆಚ್ಚು ತಿಳಿದುಕೊಂಡಿದ್ದಾರೆ. ಆ ಸಭೆ ನಮಗಿಂತ ಎತ್ತರವಾದ ಸಭೆ ಎಂದು ನಾನು ಹೇಳಿದ್ದೇನೆ. ಕಾನೂನಿನ ಇಂಪ್ಲಿಕೇಷನ್ಸ್ ಅವರಿಗೆ ಗೊತ್ತಿಲ್ಲವೇ ? ನಾನು ಲಘುವಾಗಿ ಮಾತನಾಡಲಿಲ್ಲ. ಲಘುವಾಗಿ ಮಾತನಾಡುವ ಮೂರ್ಖ ನಾನಂತೂ ಅಲ್ಲ. ಸನ್ಮಾನ್ಯ ಪ್ರಧಾನ ಮಂತ್ರಿಗಳು ಯಾವ ಪಕ್ಷದವರೇ ಆಗಿರಲಿ ಆ ಸ್ಥಾನದ ಘನತೆ ಗೌರವ ಉಳಿಸಬೇಕೆನ್ನುವುದನ್ನು ತಿಳಿದುಕೊಂಡಿದ್ದೇನೆ.

ಮಾನ್ಯ ಸದಸ್ಯರಿಂದ ವೈಯಕ್ತಿಕ ಹೇಳಿಕೆ

ಶ್ರೀ ಕೆ, ಪ್ರತಾಪಚಂದ್ರ ಶೆಟ್ಟಿಯವರಿಂದ ಶ್ರೀಮತಿ ಶಿವಕಾಂತ ಚತುರೆಯವರು ಹೊಂದಿರುವ ಅವರ ಎಂ.ಐ.ಜಿ, ಮನೆಯ ಬಗ್ಗೆ ಸ್ಪಷ್ಟೀಕರಣ

ಶ್ರೀ ಪ್ರತಾಪಚಂದ್ರ ಶೆಟ್ಟಿ.— ದಿನಾಂಕ ೫-೧೦-೧೯೮೮ ರಂದು ನನ್ನ ಹೆಸರಿನ ಮುಂದೆ ನಮೂದಿತವಾದ ಚುಕ್ಕಿ ಗುರುತಿನ ಪ್ರಶ್ನೆ ನಂಬರ್ ೯೮೮ (೨೯೩೧) ಮತ್ತು ಪೂರಕ ಪ್ರಶ್ನೆಗಳನ್ನು ನಾನು ವಿಧಾನ ಸಭೆಯಲ್ಲಿ ಕೇಳಿದ ವಿಚಾರದಲ್ಲಿ ಮಾಜಿ ಮಂತ್ರಿ ಶ್ರೀಮತಿ ಶಿವಕಾಂತ ಚತುರೆ ಅವರು ತಾ॥ ೧೩-೧೦-೧೯೮೮ ರಂದು ನನ್ನ ಅನುಪಸ್ಥಿತಿಯಲ್ಲಿ ಸದನದಲ್ಲಿ ಹೇಳಿಕೆ ನೀಡಿ, ಶ್ರೀ ಪ್ರತಾಪಚಂದ್ರ ಶೆಟ್ಟಿಯವರು ರಾಜೀನಾಮೆ ಕೊಡಲು ಈ ಸದನದ ಮುಂದೆ ಒಪ್ಪಿಕೊಳ್ಳಬೇಕೆಂದು ತಮ್ಮ ಮುಖಾಂತರ ನನ್ನಲ್ಲಿ ಕೇಳಿರುವ ಸವಾಲಿಗೆ ಹಾಕಿರುವುದರಿಂದಾಗಿ ಈ ಕೆಳಗಿನಂತೆ ಸದನದಲ್ಲಿ ಸ್ಪಷ್ಟೀಕರಣ ನೀಡಲು ನನಗೆ ಅವಕಾಶ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ತಾರೀಖು ೫–೧೦–೧೯೮೮ ರಂದು ನನ್ನ ಹೆಸರಿನಲ್ಲಿದ್ದ ಚುಕ್ಕಿ ಗುರುತಿನದಲ್ಲದ ಪ್ರಶ್ನೆ ನಂಬ್ರ ೨೯೩೧ಕ್ಕೆ ಉತ್ತರವಾಗಿ ಮಾನ್ಯ ಸಚಿವರು ನೀಡಿದ ಉತ್ತರದಲ್ಲಿ ಕರ್ನಾಟಕ ಗೃಹ ಮಂಡಲಿ ತನ್ನ ಗೂಲ್ಬರ್ಗ ವಿಭಾಗದಲ್ಲಿ ಬಿಡಿ ಮನೆ ಮತ್ತು ಬಿಡಿ ನಿವೇಶನ ಪಡೆದವರ ಹೆಸರುಗಳನ್ನು ನೀಡಿದ್ದು, ಅದರಲ್ಲಿ ಶ್ರೀಮತಿ ಶಿವಕಾಂತ ಬತುರೆಯವರು ತಾರೀಖು ೧೩–೧೦–೧೯೮೮ ರಂದು ತನ್ನ ಹೇಳಿಕೆಯಲ್ಲಿ ತನ್ನ ವಶ ಇರುವುದಾಗಿ ಒಪ್ಪಿಕೊಂಡ ಎಂ.ಐ.ಜಿ. ಟೈಪ್ ಮನೆಯ ಉಲ್ಲೇಖವಿಲ್ಲ. ಅಲ್ಲದೆ ಬೇರೆ ನಿವೇಶನ ವಶದಲ್ಲಿಲ್ಲವೆಂದು ಹೇಳಿದ್ದು, ಅದರ ಉಲ್ಲೇಖವೂ ಇಲ್ಲ. ಆದರೆ ಒಂದು ಮನೆ ಹಾಗೂ ಇನ್ನೊಂದು ನಿವೇಶನ ಅವರಿಗಿರುವ ಕುರಿತು ಮಾಹಿತಿ ನನ್ನಲ್ಲಿ ಇದ್ದು ನಾನು ಜವಾಬ್ದಾರಿಯನ್ನರಿತೇ ಪೂರಕ ಪ್ರಶ್ನೆ ಕೇಳಿರುವುದಾಗಿದೆ ಶ್ರೀಮತಿ ಚತುರೆಯವರು ತನ್ನ ಹೇಳಿಕೆಯಲ್ಲಿ ಉದ್ಧರಿಸಿದಂತೆ ''ಬೆಂಗಳೂರು, ಬೀದರ್‌ಗಳಲ್ಲಿ ಶ್ರೀಮತಿ ಶಿವಕಾಂತ ಚತುರೆಯವರಿಗೆ ೮ ರಿಂದ ೧೦ ನಿವೇಶನಗಳಿವೆ'' ಎಂದು ನಾನು ಹೇಳಿಲ್ಲ. ಈ ಸಲುವಾಗಿ ೫–೧೦–೧೯೮೮ರ ಸದನದ ಕಲಾಪಗಳನ್ನು ನೋಡಿದಲ್ಲಿ ವಿಚಾರ ಸ್ಪಷ್ಟವಾಗುತ್ತದೆ. ಆದನ್ನು ನೋಡುವ ಬದಲಿಗೆ, ಅವಸರದಿಂದ ನನ್ನ ಮೇಲೆ ರಾಜೀನಾಮೆ ಸವಾಲೆಸೆದು, ರಾಜಕೀಯವಾಗಿ ಉಪಯೋಗಿಸಿಕೊಂಡು ಕಾಂಗ್ರೆಸ್ಸಿನ ಶ್ರೀ ಪ್ರತಾಪಚಂದ್ರ ಶೆಟ್ಟರು ರಾಜೀನಾಮೆ ಕೊಡಬೇಕೆಂದು ಹೇಳಿರುವುದು ತನ್ನ ತಪ್ಪನ್ನು ಮುಚ್ಚಿಡಲು ಮಾಡುತ್ತಿರುವ ಹತಾಶ ಯತ್ನ ಎಂದು ಭಾವಿಸುತ್ತೇನೆ. ತಾವು ಸದನದ ಸಮಿತಿ ಮೂಲಕ ತನಿಖೆ ಮಾಡಿಸುವುದಾದಲ್ಲಿ ಅಥವಾ ನ್ಯಾಯಾಂಗ ತನಿಖೆಗೆ ಒಪ್ಪಿಸಿದಲ್ಲಿ, ಕರ್ನಾಟಕ ಗೃಹ ನಿರ್ಮಾಣ ಮಂಡಲಿಯ ಉಪ ವಿಭಾಗದ ಕಛೇರಿಯನ್ನು ತೆರವು ಮಾಡಿಸಿ, ಆ ಮನೆಯನ್ನು ಪಡೆದ ಹಾಗೂ ನಿವೇಶನ ಪಡೆದ ಕುರಿತಾದ ಮಾಹಿತಿಯನ್ನು ನಾನು ನೀಡಲು ಸಿದ್ಧನಿರುತ್ತೇನೆ. ನಾನು ೫–೧೦–೧೯೮೮ ರಂದು ಪೂರಕ ಪ್ರಶ್ನೆ ಸಂದರ್ಭದಲ್ಲಿ ಶ್ರೀಮತಿ ಚತುರೆಯವರ ಕುರಿತು ಉಚ್ಚರಿಸಿದ ಮಾತುಗಳಿಗೆ ಬದ್ಧನಾಗಿದ್ದೇನೆ. ಶ್ರೀಮತಿ ಚತುರೆಯವರು ನೀಡಿದಂತಹ ರಾಜೀನಾಮೆಯ ಸವಾಲಿಗೆ ನನ್ನ ಸ್ವಾಗತ. ನನ್ನ ರಾಜೀನಾಮೆ

ಪತ್ರವನ್ನು ತನಿಖೆಗೆ ಮೊದಲೇ ಶಾಸಕಾಂಗ ಪಕ್ಷದ ನಾಯಕಿಯವರಿಗೆ ಅನುವಂತಿಗಾಗಿ ಈಗಾಗಲೇ ಕಳುಹಿಸಿದ್ದೇನೆ. ಶ್ರೀಮತಿ ಚತುರೆಯವರು ತಾವು ರಾಜೀನಾಮೆ ನೀಡಂತ ತಮ್ಮ ಹೇಳಿಕೆಗೆ ಬದ್ಧರು ಎಂದು ಭಾವಿಸುತ್ತೇನೆ,

ಅಧ್ಯಕ್ಷರು.—ಈಗ ಕಾಲಿಂಗ್ ಅಟೆನ್‌ಷನ್ ತೆಗೆದುಕೊಳ್ಳೋಣವೇ ಅಥವಾ ಸಭೆಯನ್ನು ನಾಳೆಗೆ ಹಾಕೋಣವೇ ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಈಗಾಗಲೇ ಲೇಟ್ ಆಗಿದೆ. ಸಭೆಯನ್ನು ನಾಳೆಗೆ ಮುಂದಕ್ಕೆ ಹಾಕಿ.

ಅಧ್ಯಕ್ಷರು.—ಈಗ ಸಭೆಯು ಮುಕ್ತಾಯವಾಯಿತು. ಸಭೆಯನ್ನು ನಾಳೆ ಬೆಳಿಗ್ಗೆ ೯ ಗಂಟೆಗೆ ಮುಂದೂಡಲಾಗಿದೆ.

(ಸದನವು ೭ ಗಂಟೆ ೫೧ ನಿಮಿಷಕ್ಕೆ ಮುಕ್ತಾಯವಾಗಿ ಮತ್ತೆ ೧೫-೧೦-೧೯೮೮ ರಂದು ಬೆಳಿಗ್ಗೆ ೯ ಗಂಟೆಗೆ ಸೇರಲು ನಿರ್ಧರಿಸಿತು)